



ಮಾಡ್ಬಾರ್ದೆಲ್ಲ ಮಾಡ್ತೀಯ. ಜೊತೆಗೆ ಈ ದೇವ್ರು ದಿಂಡ್ರು ಬೇರೆ. ನಿಮಗೆ, ಚೆನ್ನಾಗಿ ಲಂಚ ಹೊಡೆಯೋರ್ಗೆ ಭಯ ಜಾಸ್ತಿ. ಭಯ ಇರೋರು ದೇವರಿಗೆ ಮೊರೆ ಹೋಗೋದು ಜಾಸ್ತಿ...'' ಎಂದು ರೇಗಿಸುತ್ತಿದ್ದರು. ನಾನು ಇವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡವನಲ್ಲ. ಇವರು ಬರಿ ಮಾತನಾಡುವವರೇ ಹೊರತು ವಾಸ್ತವದಲ್ಲಿ ಯಾರಿಗೂ ಸಹಾಯ ಮಾಡುವವರಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ.

ಮಧ್ಯಾಹ್ನ ಊಟವಾದ ಮೇಲೆ ನಾನು ಹೊರಗೆ ಹೋಗುವುದಿಲ್ಲ. ಆಂಟಿ ಚೇಂಬರ್‌ನಲ್ಲಿ ಒಂದರ್ಧ ಗಂಟೆ ರೆಸ್ಟ್ ತೆಗೆದುಕೊಳ್ಳುತ್ತೇನೆ. ಒಮ್ಮೊಮ್ಮೆ ಹಾಗೆ ಸಣ್ಣ ನಿದ್ದೆಗೂ ಜಾರಿಬಿಡುತ್ತೇನೆ. ಅರ್ಧ ಗಂಟೆ ಪಿವೋನ್, ಸಾಹೇಬರು ಒಳಗಡೆ ಇಲ್ಲ ಎಂದು ಸುಳ್ಳು ಹೇಳುತ್ತಾನೆ. ಇಂದೂ ಆಂಟಿ ಚೇಂಬರಿನ ದಿಂಬಿನ ಮೇಲೆ ತಲೆ ಇಟ್ಟಾಗ ಮಂಪರು ಆವರಿಸಿ ಕನಸಿಗೂ ಎಣೆಮಾಡಿಕೊಟ್ಟಿತ್ತು. ಕನಸು ಹೀಗಿತ್ತು : ಕಚೇರಿಯಲ್ಲಿ ಯಾವುದೋ ಫೈಲಿನ ಕ್ಲಿಯರೆನ್ಸಿಗೆ ಒಂದು ಲಕ್ಷ ಪಡೆಯುತ್ತಿರುವಾಗ ಎಸಿಬಿ ಅಧಿಕಾರಿಗಳು ಪ್ರವೇಶಿಸಿ ರೆಡ್ ಹ್ಯಾಂಡ್ ಆಗಿ ಹಿಡಿಯುತ್ತಾರೆ. ನಾನು ಅವಮಾನದಿಂದ ನಿಂತಿರುತ್ತೇನೆ. ಎಸಿಬಿಯ ಹಿರಿಯ ಅಧಿಕಾರಿ, ''ಏನ್ರಿ ಗಾಂಧಿ ಅಂತ ಹೆಸರಿಟ್ಟುಕೊಂಡಿದ್ದೀರಿ, ಇಷ್ಟೊಂದು ಲಂಚ ತಗೊತಿದ್ದೀರಿ ಸ್ವಲ್ಪಾನೂ ನಾಚಿಕೆ ಆಗೊಲ್ವಾ ನಿಮಗೆ? ಏನು ರೂಪಾಯಿ ನೋಟುಗಳನ್ನೇನು ಅಗಿದು ತಿಂತೀರೇನ್ರಿ? ನೋಟಿನ ಮೇಲಿರೊ ಗಾಂಧೀನ ನೋಡಿಯಾದ್ರೂ ಏನೂ ಅನ್ನಲ್ವಾ...'' ಎಂದು ಬಡಬಡಿಸುತ್ತಿದ್ದ. ಆ ಅಧಿಕಾರಿ ನನಗೇನೂ ಹೊಸಬನೇನೂ ಅಲ್ಲ. ಈ ಹಿಂದೆ ಆತ ಲೋಕಾಯುಕ್ತದಲ್ಲಿದ್ದಾಗ ತಿಂಗಳಿಗೆ ಐದು ಸಾವಿರ ಮಂಥ್ಲಿ ಕೊಡ್ತಿದ್ದೆ. ಈಗ ಎಲ್ಲರ ಮುಂದೆ ಸತ್ಯ ಹರಿಶ್ಚಂದ್ರನಂತೆ ಮಾತನಾಡುತ್ತಿದ್ದಾನೆ. ನನಗೂ ರೇಗಿಹೋಗಿತ್ತು. ''ಕಾನೂನು ಪ್ರಕಾರ ಅದೇನು ಮಾಡ್ತೀರೋ ಮಾಡ್ಕೊಳ್ರಿ, ನಿಮ್ದೇನು ಅಂತ ಗೊತ್ತು ನಂಗೆ. ದೊಡ್ಡ ಮೀನು ಸಣ್ಣ ಮೀನನ್ನು ತಿನ್ನೋದು ಪ್ರಕೃತಿ ನಿಯಮ. ಹಾಗೆ ಈ ಪವರ್ ಕೂಡಾ. ಜಾಸ್ತಿ ಪವರ್ ಇರೋರು ಕಡಿಮೆ ಪವರ್ ಇರೋರನ್ನ ನುಂಗ್ತಾಹೋಗ್ತಾರೆ...'' ಎಂದು ಗುಡುಗಿದ್ದೆ. ಎಸಿಬಿಯ ಇನ್ನೊಬ್ಬ ಅಧಿಕಾರಿ ಪ್ರೊಸೀಜರ್ ಪ್ರಕಾರ ನನ್ನ ಬಟ್ಟೆ ಬಿಚ್ಚಲು ಹೇಳಿದ್ದರು. ನಾನು ಒಪ್ಪದಿದ್ದಾಗ ಅವನೇ ಶರಟಿಗೆ ಕೈ ಹಾಕಿದ್ದ. ಕಿರುಚಿಕೊಂಡು ಕೊಸರಿಕೊಳ್ಳಲು ಯತ್ನಿಸಿದಾಗ ಎಚ್ಚರವಾಗಿತ್ತು. ಮೈ ಬೆವೆತು ಹೋಗಿತ್ತು. ಮುಖ ತೊಳೆದು ಸೀಟಲ್ಲಿ ಕುಳಿತುಕೊಳ್ಳುವುದಕ್ಕೂ ಮೊಬೈಲ್ ರಿಂಗ್ ಆಗುವುದಕ್ಕೂ ಒಂದೇ ಆಗಿತ್ತು. ಮನೋಹರ್ ಹೆಸರು ಡಿಸ್‌ಪ್ಲೆ ಆಗುತ್ತಿತ್ತು. ಮನೋಹರ್ ನನ್ನ ಪಿಯುಸಿ ಮತ್ತು ಡಿಗ್ರಿ ಕ್ಲಾಸ್ ಮೇಟ್. ಅಂತರಂಗದ ಗೆಳೆಯ ಅಂತಾರಲ್ಲ ಹಾಗೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದು ತೆರಿಗೆ ಇಲಾಖೆಯಲ್ಲಿ ಈಗ ಉನ್ನತ ಹುದ್ದೆಯಲ್ಲಿದ್ದಾನೆ. ದಿಲ್ದಾರ್ ಮನುಷ್ಯ. ಮಾವ ಮಾಜಿ ಎಂಎಲ್‌ಎ. ಹೆಚ್ಚಿನ ಸರ್ವಿಸನ್ನು ಬೆಂಗಳೂರಿನಲ್ಲೇ ಸವೆಸಿರುವುದರಿಂದ ಫೈನಾನ್ಸಿಯಲಿ ತುಂಬಾ ಸೌಂಡ್ ಆಗಿದ್ದಾನೆ. ನಾವಿಬ್ಬರು ವಾರದಲ್ಲಿ ಎರಡುಮೂರು ಸಾರಿಯಾದರೂ ಸೇರುತ್ತೇವೆ, ತಪ್ಪದೆ ಹತ್ತು ವರ್ಷಗಳಿಂದ. ರಿಸೀವ್ ಮಾಡಿಕೊಂಡು ''ಹಲೋ...'' ಎಂದೆ. ''ಏನೋ ಗಾಂಧಿ ಊಟ ಆಯ್ತೇನೊ...'' ಮಾಮೂಲಿಯಾಗಿ ವಿಚಾರಿಸಿದ್ದ. ''ಆಯ್ತು ಕಣೊ, ನಿಂದಾಯ್ತಾ...'' ''ಸಂಜೆ ಏಳೂವರೆ ಗಂಟೆಗೆ ಬೌರಿಂಗ್ ಇನ್‌ಸ್ಟಿಟ್ಯೂಟ್ ಕಣಮ್ಮ. ಒಂಬತ್ತು ಗಂಟೆಗೆಲ್ಲ ಕ್ಲೋಸ್ ಮಾಡ್ಬಿಡೋಣ...'' ಉತ್ಸಾಹ ತುಂಬಿತ್ತು ಧ್ವನಿಯಲ್ಲಿ. ''ಇಲ್ಲ ಕಣೋ, ಯಾಕೊ ಕುಡಿಯೋದು ಬಿಟ್ಬಿಡೋಣ ಅನ್ನಿಸ್ತಿದೆ...'' ಹೇಳಿದ್ದೆ ನಾನು. ''ಏನಾಯ್ತೋ ಗಾಂಧಿ? ಒರಿಜಿನಲ್